ಅಕಾಡೆಮಿ ಪ್ರಶಸ್ತಿ ಬಂದಾಗ, ವಿದ್ಯಾರಣ್ಯ ಹೈಸ್ಕೂಲಿನಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಡಿ.ಸಿ. ಪಾವಟೆ, ಹಾಮಾನಾ ಅವರು ವೇದಿಕೆಯ ಮೇಲೆ ಇದ್ದಾಗಲೇ, ಒಬ್ಬ ಸಭಿಕರಾಗಿ ಸಭಾಂಗಣದಲ್ಲಿ ಕುಳಿತಿದ್ದ ಬೇಂದ್ರೆ ಒಮ್ಮೆಲೇ ಚಿಗರಿಗೆದ್ದು ಶಂಬಾ ಅವರನ್ನು ಏಕವಚನದಲ್ಲಿ ತೆಗಳಿ, ಜಗಳ ಮಾಡಿದ್ದು ಕಂಡಿದ್ದೇನೆ. ಅದು ಅವಿಚ್ಛಿನ್ನ ಯಾ ಪ್ರಚ್ಛನ್ನ ಧಾರವಾಡದ ಸಾಹಿತ್ಯ ಸಂಸ್ಕೃತಿ ಜಾತಿ ಪಂಗಡಗಳನ್ನು ಢಾಣಾಢಂಗುರವಾಗಿ ಇಬ್ಭಾಗಿಸಿದ ದಿನವಾಗಿತ್ತು ಎಂದೇ ನನಗನಿಸಿದೆ. ಸಾಲಿ ರಾಮಚಂದ್ರರಾವ, ಶಂ.ಬಾ. ಜೋಶಿ, ಬೆಟಗೇರಿ ಕೃಷ್ಣಶರ್ಮ, ಗೋ.ವೆಂ. ಚುಳಕಿ ಅಂಥವರು ಬೆಳೆಯುವುದನ್ನು ಸಹಿಸದ ಸಂಗತಿಯನ್ನು ಬೆಟಗೇರಿಯವರೇ ದಾಖಲಿಸಿದ್ದಾರೆ. ಶೇ.ಗೋ. ಕುಲಕರ್ಣಿ ಬರೆದ 'ಗೆಳೆಯರ ಬಳಗ'ದ ಇತಿವೃತ್ತವನ್ನು ಓದಿದ್ದೇನೆ. ಅವರ ದೃಷ್ಟಿಯಲ್ಲಿ ಉಳಿದವರೆಲ್ಲರೂ ಸಣ್ಣವರು. ಇಷ್ಟೆಲ್ಲ ಗೊತ್ತಿದ್ದರೂ ಅನೇಕ ಸಲ ಅವರ ಮನೆಗೆ ಹೋಗಿದ್ದೇನೆ. ನಮ್ಮ ಸಂಕ್ರಮಣ ಪತ್ರಿಕೆಗಾಗಿ ಅವರ ಮನೆಯಲ್ಲಿ ಕುಳಿತು ಕವಿತೆ ಬರೆಸಿಕೊಂಡಿದ್ದೇನೆ. ಕರ್ನಾಟಕ ಕಾಲೇಜಿನ ಅನೇಕ ಕಾರ್ಯಕ್ರಮಗಳಿಗೆ ನನ್ನ ವಿನಂತಿ ಮನ್ನಿಸಿ ಬಂದಿದ್ದಾರೆ. 'ನಾಕು ತಂತಿ'ಗೆ ಜ್ಞಾನಪೀಠ ಪ್ರಶಸ್ತಿ ಹಂಚಿಹೋಗಿ, ಅರ್ಧಹಣ ಬಂದಿದ್ದಕ್ಕೆ ಚಂಪಾ 'ಎರಡು ತಂತಿಗೆ' ಅಂದಾಗಿನಿಂದ ರಾವು ಆಗಿದ್ದರೂ, ಅವನು ನನ್ನ ಜೊತೆ ಸಾಧನಕೇರಿಗೆ ಹೋದಾಗ, ಹೆಚ್ಚು ಕೂಗಾಡದೇ ಸಕ್ಕರೆ ಕೊಟ್ಟು ಕಳಿಸಿದ್ದು ಮುಂತಾದ ಅನೇಕ ಸಿಹಿ—ಕಹಿ ಪ್ರಸಂಗಗಳಿವೆ. ಏನಿದ್ದರೂ ಕನ್ನಡದಲ್ಲಿ ನಾವು ಮುಂದುವರಿದ ಬೇಂದ್ರೆಕಾವ್ಯದ ಸಂತಾನವೇ ಅಲ್ಲವೇ? ಕಡಪಾ ಮೈದಾನದಲ್ಲಿ ಅವರಿಗೆ ಅವಮಾನವಾಗುವ ರೀತಿಯಲ್ಲಿ ಯಾರಿಗೂ ಕಾಣದಂಥ ಒಂದು ಪುಟ್ಟ ಮೂರ್ತಿಯನ್ನು ನಿಲ್ಲಿಸಿದ್ದುದು ಧಾರವಾಡದ ಸಂಸ್ಕೃತಿ ಕನ್ನಡಕ್ಕೇ ಮಾಡಿದ ಅವಮಾನ. ಬಹುಶಃ ರತ್ನಾಗಿರಿಯ ಕಡೆಯಿಂದ ಬಂದಿದ್ದ ಕೊಂಕಣಸ್ಥ ಚಿತ್ಪಾವನರಾಗಿದ್ದ ಬೇಂದ್ರೆ ಧಾರವಾಡದಲ್ಲಿದ್ದ ಬ್ರಾಹ್ಮಣರು, ಲಿಂಗಾಯತರು ಇಬ್ಬರಿಂದಲೂ ದೂರ ಮಾಡಲ್ಪಟ್ಟಿದ್ದರೇನೋ ಗೊತ್ತಿಲ್ಲ. ಆ ಒಳನೋವಿನಿಂದಲೇ ಅವರು ಎರಡೂ ಕಡೆಯವರತ್ತ ತಮ್ಮ ಹರಿತ ಮಾತಿನ, ವ್ಯಂಗ್ಯದ ಇಮ್ಮೈ ಅಲುಗಿನ ಕತ್ತಿ ಬೀಸುತ್ತ ಸಾಗಿದ್ದಿರಬಹುದು. ನಾನೂ ಬೇಂದ್ರೆಯವರನ್ನು ಟೀಕಿಸಿ ಬರೆದಿದ್ದೇನೆ, ಆದರೂ ಅವರ ಬಗ್ಗೆ ಆದರ, ಅಭಿಮಾನ. ಆದ್ದರಿಂದಲೇ ಆಗಾಗ, ಅವರನ್ನು ಬಳಸಿಕೊಂಡವರನ್ನು ಟೀಕಿಸುತ್ತ ಬಂದಿದ್ದೇನೆ. ಅನೇಕ ಅಡೆತಡೆಗಳ ನಡುವೆಯೂ ಅವರ ಹೆಸರಿನ ಪ್ರಶಸ್ತಿ ನನಗೆ ಬಂತು. ಹೆಮ್ಮೆಯಿಂದ ಸ್ವೀಕರಿಸಿದೆ, ಅದನ್ನು ನಾನು ಕಲಿತ ಪ್ರಾಥಮಿಕ ಶಾಲೆಗೆ ಕಾಣಿಕೆಯಾಗಿ ಕೊಟ್ಟೆ. ನಾನು ನೋಡಿದ, ನಾನು ಕೇಳಿದ ಇಂಥ ಅನೇಕ ಬೇಂದ್ರೆಗಳಿದ್ದಾರೆ. ಏನಿದ್ದರೂ ಬೇಂದ್ರೆ ನಮ್ಮವರು, ನಮಗೆ ಬೇಕಾದವರು.

◆ **'ಧಾರವಾಡ ತಾಯಿ'ಗೆ ಬೇಂದ್ರೆ, ಶಂಬಾ, ಕಣವಿ, ಕಲಬುರ್ಗಿ, ಗಿರಡ್ಡಿ, ಚಂಪಾ, ನೀವು, ಶ್ಯಾಮಲಾದೇವಿ ಬೆಳಗಾಂವಕರ, ವೀಣಾ ಶಾಂತೇಶ್ವರ, ಗಿರೀಶ ಕಾರ್ನಾಡ... ಓಹ್ ಅಗಣಿತ ಜೀವಸೆಲೆಗಳು. ತಾಯಿಯೊಬ್ಬಳೇ ಆದರೂ ಪ್ರತಿ ಮಗು ಕಾಣುವ ತಾಯ್ತನದ ಅನುಭೂತಿ ಬೇರೆಯೇ ಅಲ್ವೇ? ನಿಮ್ಮ ಅನುಭವ...**

ನಾನು ಧಾರವಾಡದ ಕೂಸು. ಹೀಗೆ ಹೇಳಿಕೊಳ್ಳಲು ಹೆಮ್ಮೆ ನನಗೆ. ಕಡು ಬಡತನದಲ್ಲಿ ನನ್ನನ್ನು, ಅವ್ವನನ್ನು ಬದುಕಿಸಿ, ಬೆಳೆಸಿದ ಧಾರವಾಡ ನಮಗೆ ಕೊಟ್ಟ ಅನುಭವಗಳ ಭಂಡಾರವೇ ನಮ್ಮ ಶ್ರೀಮಂತಿಕೆ. ಬೇಂದ್ರೆಯವರ ಭೌತಿಕ ಬದುಕೂ ಹಾಗೇ ಇತ್ತಲ್ಲವೆ? ನಾನು ಗಾಂಧೀಪ್ರಣೀತ ವರ್ಧಾಮಾದರಿಯ ಶಿಕ್ಷಣ ನೀಡುತ್ತಿದ್ದ ಇಲ್ಲಿಯ ಸರಕಾರಿ ಪ್ರಾಯೋಗಿಕ ಶಾಲೆಯಲ್ಲಿ ಕಲಿತವನು. ಕಿಟೆಲ್‌ರಂಥವರು ನಡೆದಾಡಿದ, ವರದರಾಜ ಹುಯಿಲಗೋಳ ಅವರಂಥ ಶಿಕ್ಷಕರು ಕಲಿಸುತ್ತಿದ್ದ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಕಲಿತವನು. ಕರ್ನಾಟಕ ಕಾಲೇಜಿನಲ್ಲಿ ವಿ.ಕೃ. ಗೋಕಾಕ, ವಿ.ಎಂ. ಇನಾಮದಾರ, ಆರ್ಮಾಂದೊ ಮೆನೆಝಿಸ್ ಅಂಥವರಿಂದ ಕಲಿತವನು. ಕವಿವಿಯಲ್ಲಿ ಸ್ವತಃ